## ನಿಮ್ಮೊಡನೆ

# ಕೆರಳಿಸಬೇಡಿ, ಅರಳಿಸಿ..

ದಾದಾಸಾಹೇಬ್ ಫಾಲ್ಕೆಯವರು ನಿರ್ಮಿಸಿ, ನಿರ್ದೇಶಿಸಿದ ಮೂಕಿ ಚಿತ್ರ 'ರಾಜಾ ಹರಿಶ್ಚಂದ್ರ' ಬಿಡುಗಡೆಯಾಗಿ ನೂರು ವರ್ಷಗಳು ಸಂದಿವೆ. ಅದಾಗಿ 18 ವರ್ಷಗಳ ಬಳಿಕ ಭಾರತದ ಮೊದಲ ಟಾಕಿ ಚಿತ್ರ 'ಆಲಂ ಆರಾ' ಬಿಡುಗಡೆಯಾಯಿತು. ಈ ನೂರರ ಸಂಭ್ರಮವನ್ನು ಆಚರಿಸಲು ದಕ್ಷಿಣ ಭಾರತದ ಚಿತ್ರರಂಗ ಇತ್ತೀಚೆಗೆ ಚೆನ್ನೈನಲ್ಲಿ ಒಟ್ಟುಸೇರಿತ್ತು. ಸಿನಿಮಾದವರ ಸಮಾರಂಭ ಎಂದ ಮೇಲೆ ಹಾಡು, ಕುಣಿತ, ಸನ್ಮಾನಗಳೆಲ್ಲವೂ ಮಾಮೂಲಿ. ಚೆನ್ನೈನಲ್ಲೂ ಅದು ಪುನರಾವರ್ತನೆಯಾಯಿತು. ಈ ಮಧ್ಯೆ, ಸಮಾರಂಭದಲ್ಲಿ ಕನ್ನಡ ಸಹಿತ ದಕ್ಷಿಣ ಭಾರತದ ಇತರ ಭಾಷೆಗಳವರನ್ನು ಕಡೆಗಣಿಸಿ, ಬರೀ ತಮಿಳರನ್ನೇ ಮೆರೆಸಲಾಗಿದೆ ಎಂಬ ಅಪಸ್ವರವೂ ಕೇಳಿಬಂತು. 'ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಅವರ ಪ್ರತಿಷ್ಠೆಗೆ ಪ್ರಚಾರ ನೀಡಲಷ್ಟೇ ಈ ಸಮಾರಂಭ' ಎನ್ನಲಾಯಿತು. ಒಟ್ಟಾರೆ ಸಮಾರಂಭದಲ್ಲಿ ಕನ್ನಡ ಚಿತ್ರರಂಗದ ಯಾವ ಹೆಗ್ಗಳಿಕೆಯೂ ದಾಖಲಾಗಲಿಲ್ಲ. ಕನ್ನಡ ಚಿತ್ರರಂಗ ಉದ್ಯಮವಾಗಿ ಗಟ್ಟಿಗೊಂಡು ಉಳಿಯುವುದಕ್ಕೆ ಕಾರಣರಾಗಿರುವ ಯಾವ ದೊಡ್ಡ ನಟ–ನಟಿಯರೂ ಸಮಾರಂಭದಲ್ಲಿ ಭಾಗವಹಿಸಲಿಲ್ಲ. ಕನ್ನಡ ಚಿತ್ರರಂಗದ ಒಳಗೆ ಎಲ್ಲವೂ ಸರಿಯಾಗಿಲ್ಲ ಎನ್ನುವುದೂ ಬಹಿರಂಗಕ್ಕೆ ಬಂತು.

ಕರ್ನಾಟಕದಲ್ಲಿ 1930ರ ಸುಮಾರಿನಲ್ಲೇ ಗುಬ್ಬಿ ವೀರಣ್ಣನವರು ನಿರ್ಮಿಸಿ, ನಟಿಸಿದ ಮೊದಲ ಮೂಕಿ ಚಿತ್ರ 'ಸಾಂಗ್ ಆಫ್ ಲೈಫ್.' 1934ರಿಂದ ಕನ್ನಡದಲ್ಲೂ ಟಾಕಿ ಚಿತ್ರಯುಗ ಆರಂಭವಾಯಿತು. ಷಾ ಚಮನ್ಲಾಲ್ ದೂಂಗಾಜಿ ಅವರು ನಿರ್ಮಿಸಿದ ಮೊದಲ ಕನ್ನಡ ಚಿತ್ರ 'ಸತಿ ಸುಲೋಚನ'. ಅದೇ ವರ್ಷ 'ಭಕ್ತ ಧ್ರುವ' ಕೂಡಾ ತೆರೆಕಂಡಿತು. ಅಂದರೆ ಕನ್ನಡ ಚಿತ್ರರಂಗಕ್ಕೀಗ 83 ವರ್ಷ ದಾಟಿದೆ. ಈ 83 ವರ್ಷಗಳಲ್ಲಿ ಕನ್ನಡ ಚಿತ್ರರಂಗ ನಮ್ಮ ಭಾಷೆ, ಸಂಸ್ಕೃತಿಯನ್ನು ಬೆಳೆಸುವುದರ ಜತೆಗೆ, ಕನ್ನಡಿಗರ ಪ್ರಜ್ಞಾವಲಯವನ್ನು ವಿಸ್ತರಿಸಲು ಎಷ್ಟರ ಮಟ್ಟಿಗಿನ ಕೊಡುಗೆ ನೀಡಿದೆ ಎನ್ನುವುದರ ಬಗ್ಗೆ ಒಟ್ಟಂದದ ಅವಲೋಕನ ನಡೆದಿದೆಯೆ? ಕನ್ನಡದ ಅಂತಃಸತ್ವವನ್ನು ಬೆಳೆಸುವಲ್ಲಿ ಕನ್ನಡ ಚಿತ್ರರಂಗದ ಕೊಡುಗೆ ಬಗ್ಗೆ, ಭಾರತೀಯ ಚಿತ್ರರಂಗದ ನೂರರ ಸಂಭ್ರಮದಲ್ಲಿ ಕನ್ನಡದ ಪಾಲಿನ ಬಗ್ಗೆ ಸೂಕ್ತ ಅವಲೋಕನ ನಡೆದಿಲ್ಲ ಎಂದೇ ಹೇಳಬಹುದು. ಈ ಅವಲೋಕನ ಕೇವಲ ಚಿತ್ರರಂಗದ ಹೊಣೆ ಮಾತ್ರವಲ್ಲ, ಕನ್ನಡ ಸಾಹಿತ್ಯ–ಸಾಂಸ್ಕೃತಿಕ ವಲಯದ ಹೊಣೆಯೂ ಹೌದು. ಒಟ್ಟು ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಗೆದ್ದುಕೊಂಡಿರುವ ಕನ್ನಡ ಸಾಹಿತ್ಯ ವಲಯ, ಭಾರತದ ಬಹುತೇಕ ಭಾಷೆಗಳಿಗಿಂತ ಹೆಚ್ಚು ಸಮೃದ್ಧವಾಗಿ ಬೆಳೆದಿದೆ. ಆದರೆ ಇತ್ತೀಚೆಗೆ ಕನ್ನಡ ಸಾಹಿತ್ಯ ಮತ್ತು ಚಿತ್ರರಂಗದ ನಡುವಣ ಕೊಡುಕೊಳ್ಳುವಿಕೆ ಬಹುತೇಕ ನಿಂತೇ ಹೋದಂತಿದೆ. ಮಲಯಾಳಂ ಮತ್ತು ಬಂಗಾಳೀ ಭಾಷೆಗಳಲ್ಲಿ ಸಾಹಿತ್ಯ ಮತ್ತು ಚಿತ್ರರಂಗದ ನಡುವಣ ಕೊಡುಕೊಳ್ಳುವಿಕೆಯ ಆರೋಗ್ಯಕರ ಸಂಬಂಧವನ್ನು ಗಮನಿಸಿದರೆ ಕನ್ನಡ ಚಿತ್ರಗಳ ಅಂತಃಸತ್ವದ ಬತ್ತುವಿಕೆಗೆ ಕಾರಣಗಳು ಹೊಳೆಯುತ್ತವೆ.

ಇತ್ತೀಚಿನ ಕನ್ನಡ ಸಿನಿಮಾಗಳನ್ನು ಗಮನಿಸಿದರೆ ಶೇಕಡಾ 80ರಷ್ಟು ಚಿತ್ರಗಳು ಕಾಮನೆ–ಭಾವನೆಗಳ ಕೆರಳುವಿಕೆಗಳಷ್ಟೇ ಆಗಿವೆ. ಭಾಷೆ, ಸಂಸ್ಕೃತಿಗಳ ಸನ್ನಿಧಿಯಲ್ಲಿ ಭಾವಕೋಶವನ್ನು ಅರಳಿಸಿ, ಬದುಕನ್ನು ಸಹನೀಯವಾಗಿಸುವ ಚಿತ್ರಗಳ ಕೊರತೆ ಎದ್ದು ಕಾಣುತ್ತದೆ. ಜತೆಗೆ ಭಾಷೆಯ ಅಪಬಳಕೆ ಮತ್ತು ಸಾಮಾಜಿಕ ಬದ್ಧತೆಯ ಕೊರತೆ ಬೇರೆ. ಹಾಗೆ ನೋಡಿದರೆ ಕನ್ನಡಕ್ಕೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಗೌರವವನ್ನು ದೊರಕಿಸಿಕೊಟ್ಟವರು ಹೊಸ ಅಲೆಯ ಚಿತ್ರಗಳ ನಿರ್ದೇಶಕ–ನಿರ್ಮಾಪಕರೇ. ಆದರೆ ಅವರು ನಿರ್ಮಿಸಿರುವ ಚಿತ್ರಗಳಿಗೆ ಪ್ರೋತ್ಸಾಹದ, ಬಂಡವಾಳದ ಮತ್ತು ಮಾರುಕಟ್ಟೆಯ ಕೊರತೆ ಕಾಡುತ್ತದೆ. ಕಮರ್ಷಿಯಲ್ ಚೌಕಟ್ಟಿನಲ್ಲಿ ನಿಂತು ನೋಡಿದರೂ ಕಳೆದ ಶತಮಾನದ ಅಂತ್ಯದಲ್ಲಿ ಬಂದಂತಹ ಸದಭಿರುಚಿಯ ಸಾಮಾಜಿಕ ಚಿತ್ರಗಳದ್ದೇ ಸುವರ್ಣಯುಗ. ಇವತ್ತಿಗೂ ಒಳ್ಳೆಯ ಚಿತ್ರಗಳ ಬಗ್ಗೆ ಮಾತನಾಡುವಾಗ ನಾವೆಲ್ಲ ಭಾವುಕರಾಗಿ 'ರಾಜ್ ಯುಗ'ವನ್ನು ನೆನಪಿಸಿಕೊಳ್ಳುವುದಕ್ಕೆ ಆಗ ಬಂದ ಸದಭಿರುಚಿಯ ಚಿತ್ರಗಳೇ ಕಾರಣ. ಪ್ರೇಮ–ಕಾಮದ ಕಥೆಗಳನ್ನು ಒಳಗೊಂಡೂ ಅವುಗಳನ್ನು ಮೀರಿದ ಸಮೃದ್ಧ ಸಾಂಸ್ಕೃತಿಕ ಬದುಕಿನ ಮಾನವೀಯ ಕಥೆಗಳನ್ನು ಹೇಳಲು ನಮ್ಮವರಿಗೆ ಏಕೆ ಸಾಧ್ಯವಾಗುತ್ತಿಲ್ಲ? ನಮ್ಮ ಸಾಮಾಜಿಕ ಮೌಢ್ಯ, ಕಂದಾಚಾರ, ಜಾತೀಯತೆ, ಅಸಮಾನತೆ, ಅವೈಚಾರಿಕತೆಯ ನಿಲುವುಗಳನ್ನು ಬದಲಿಸುವಲ್ಲಿ ತೀವ್ರ ಪರಿಣಾಮ ಬೀರಲು ಇತ್ತೀಚಿನ ಕನ್ನಡ ಸಿನಿಮಾಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ? ನೂರರ ಸಂಭ್ರಮದ ಹೊಸ್ತಿಲಲ್ಲಿ ನಿಂತು ಚಿತ್ರರಂಗ ಮತ್ತು ಪ್ರೇಕ್ಷಕರು ಒಟ್ಟಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆಗಳಿವು.

■ ಬಿ.ಎಂ.ಹನೀಫ್

ಪ್ರೇಮ–ಕಾಮದ ಕಥೆಗಳನ್ನು ಒಳಗೊಂಡೂ ಅವುಗಳನ್ನು ಮೀರಿದ ಸಮೃದ್ಧ ಸಾಂಸ್ಕೃತಿಕ ಬದುಕಿನ ಮಾನವೀಯ ಕಥೆಗಳನ್ನು ಹೇಳಲು ನಮ್ಮವರಿಗೆ ಏಕೆ ಸಾಧ್ಯವಾಗುತ್ತಿಲ್ಲ? ನಮ್ಮ ಸಾಮಾಜಿಕ ಮೌಢ್ಯ, ಕಂದಾಚಾರ, ಜಾತೀಯತೆ, ಅಸಮಾನತೆ, ಅವೈಚಾರಿಕತೆಯ ನಿಲುವುಗಳನ್ನು ಬದಲಿಸುವಲ್ಲಿ ತೀವ್ರ ಪರಿಣಾಮ ಬೀರಲು ಇತ್ತೀಚಿನ ಕನ್ನಡ ಸಿನಿಮಾಗಳಿಗೆ ಏಕೆ ಸಾಧ್ಯವಾಗುತ್ತಿಲ್ಲ?



ಈಶ್ವರ